ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ**




# ಸ್ವಚ್ಛ ವಾಹಿನಿ ರಥಸಾರಥಿಯಾಗಿ ಸ್ವಾವಲಂಬಿ ಜೀವನ ಕಂಡ ಚಿಕ್ಕಬಳ್ಳಾಪುರದ ನಂದಿನಿ

ಮಹಿಳೆ ಇಂದು ಎಲ್ಲಾ ರಂಗದಲ್ಲೂ ತನ್ನದೇ ಆದ ಛಾಪು ಮೂಡಿಸಿದ್ದಾಳೆ. ಆಕೆ ಇಂದು ಅಬಲೆಯಾಗಿ ಉಳಿದಿಲ್ಲ. ಮಹಿಳೆ ಮನಸ್ಸು ಮಾಡಿದರೆ ಏನೂ ಬೇಕಾದರೂ ಸಾಧಿಸಬಲ್ಲಳು ಅನ್ನೋದಕ್ಕೆ ಸಾಕ್ಷಿಯಾಗಿ ನಿಂತಿದ್ದಾಳೆ. ಮನೆಯ, ಸಂಸಾರದ ಬಂಡಿ ಸಾಗಿಸುವ ಆಕೆ ಅಂತರಿಕ್ಷಯಾನದ ನೌಕೆಯವರೆಗೂ ಸಾಧನೆಯ ಶಿಖರ ಏರಿದವಳು. ಸಿಕ್ಕ ಅವಕಾಶಗಳನ್ನು ಬಳಸಿಕೊಂಡು ಛಲಬಿಡದೆ ಗುರಿ ತಲುಪುತ್ತಿದ್ದಾಳೆ.



ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಸ್ವಚ್ಛ ಭಾರತ್ ಮಿಷನ್(ಗ್ರಾ) ಯೋಜನೆಯಡಿ ಮಹಿಳಾ ಸಬಲೀಕರಣಕ್ಕೆ, ಮಹಿಳೆಯರ ಏಳಿಗೆಗೆ ಪೂರಕ ಅವಕಾಶಗಳನ್ನು ಒದಗಿಸುತ್ತಿದ್ದು , ಗ್ರಾಮೀಣ ಮಹಿಳೆಯರು ಯೋಜನೆಯ ಲಾಭ ಪಡೆದು ಸ್ವಾವಲಂಬಿಯಾಗಿ ಹೊರಹೊಮ್ಮುತ್ತಿದ್ದಾರೆ. ಅದೇ ಹಾದಿಯಲ್ಲಿ ಸಾಗಿದ ಚಿಕ್ಕಬಳ್ಳಾಪುರ ಜಿಲ್ಲೆಯ ತಿಪ್ಪೇನಹಳ್ಳಿ ಗ್ರಾಮದ ನಂದಿನಿ ಸ್ವಚ್ಛತಾ ವಾಹಿನಿ ಚಾಲಕಿಯಾಗಿ ಎಲ್ಲರಿಗೂ ಮಾದರಿಯಾಗಿದ್ದಾರೆ.

# ಗ್ರಾಮೀಣ ಮಹಿಳೆ ಜೀವನಕ್ಕೆ ಆಸರೆಯಾದ ಸ್ವಚ್ಛವಾಹಿನಿ

ತಿಪ್ಪೇನಹಳ್ಳಿ ಗ್ರಾಮದ ನಂದಿನಿ ನಂದಾದೀಪ ಎಂಬ ಸ್ವ-ಸಹಾಯ ಸಂಘದ ಸಹಾಯದಿಂದ ಚಾಲನಾ ತರಬೇತಿಯನ್ನು ಪಡೆದು ಡಿಎಲ್ ಅನ್ನು ಪಡೆದುಕೊಂಡರು. ಇಂದು ಪುರಷರಿಗೆ ಕಡಿಮೆಯಿಲ್ಲ ಎನ್ನುವಂತೆ ವಾಹನ ಚಾಲನೆ ಮಾಡುವ ಮೂಲಕ ನಂದಿನಿ ಗಮನ ಸೆಳೆಯುತ್ತಿದ್ದಾರೆ. ಗ್ರಾಮ ಪಂಚಾಯಿತಿಯ ಸ್ವಚ್ಛತಾ ವಾಹನದ ಚಾಲಕಿಯಾಗಿ ಮನೆ ಮನೆಗೆ ತೆರಳಿ ಕಸ ಸಂಗ್ರಹಿಸುವ ಮೂಲಕ ಗ್ರಾಮವನ್ನು ಕಸಮುಕ್ತವಾಗಿಸುವಲ್ಲಿ ಮಹತ್ತರ ಸೇವೆ ಸಲ್ಲಿಸುತ್ತಿದ್ದಾರೆ.

ಸ್ವಚ್ಛವಾಹಿನಿ ಚಾಲಕಿ ನಂದಿನಿಯವರ ಪತಿ ಕಳೆದ ಎರಡು ವರ್ಷಗಳ ಹಿಂದೆ ಅನಾರೋಗ್ಯದಿಂದ ಅಕಾಲಿಕ ಮರಣಕ್ಕೀಡಾದರು. ಮುಂದೆ ಬದುಕು ಹೇಗೆ ಅನ್ನೋ ಚಿಂತೆ ಮಾಡುತ್ತ ಕೂರದೆ, ತನ್ನ ಎರಡು ಮಕ್ಕಳ ಹಾಗೂ ತನ್ನ ಭವಿಷ್ಯಕ್ಕಾಗಿ ಪತಿ ಮಾಡುತ್ತಿದ್ದ ಚಾಲನಾ ವೃತ್ತಿಯನ್ನೇ ಆಯ್ಕೆ ಮಾಡಿಕೊಂಡ ನಂದಿನಿ ಸ್ವಾವಲಂಬಿಯಾಗಿ ಜೀವನ ನಡೆಸುತ್ತಿದ್ದಾರೆ.

# ಮಹಿಳಾ ಸಾರಥಿಯಾಗಿ ಗ್ರಾಮದ ಸ್ವಚ್ಛತೆಗೆ ಶ್ರಮಿಸುತ್ತಿರುವ ನಂದಿನಿ

ಸ್ವಚ್ಛವಾಹಿನಿ ಸಾರಥಿಯಾಗಿರುವ ನಂದಿನಿ, ಗ್ರಾಮ ಪಂಚಾಯತಿ ವತಿಯಿಂದ ಪ್ರತಿ ತಿಂಗಳು 10 ಸಾವಿರ ರೂ. ವೇತನ ಪಡೆಯುತ್ತಾರೆ. ಕಳೆದ ಆರು ತಿಂಗಳಿಂದ ಚಿಕ್ಕಬಳ್ಳಾಪುರ ತಾಲೂಕಿನ ತಿಪ್ಪೇನಹಳ್ಳಿ ಗ್ರಾಮ ಪಂಚಾಯತಿಯ ಸ್ವಚ್ಛವಾಹಿನಿಯ ರಥಸಾರಥಿಯಾಗಿ ಕಾಯಕ ಮಾಡುತ್ತಿದ್ದಾರೆ. ಪ್ರತಿದಿನವೂ ಬೆಳಿಗ್ಗೆ 6 ಗಂಟೆಗೆ ಪಂಚಾಯತಿಗೆ ಆಗಮಿಸುವ ನಂದಿನಿ, ಸಹಾಯಕಿ ಗಂಗಮ್ಮ ಜೊತೆ ಸೇರಿ ತಿಪ್ಪೇನಹಳ್ಳಿ ಗ್ರಾಮ ಪಂಚಾಯತಿಯ ಪ್ರತಿಯೊಂದು ಹಳ್ಳಿಗಳಿಗೂ ತೆರಳಿ ಕಸ ಸಂಗ್ರಹಣೆ ಮಾಡಿಕೊಂಡು ಬರುವ ಕಾಯಕ ಮಾಡುತ್ತಿದ್ದಾರೆ. ಸ್ವಚ್ಛ ಭಾರತ್ ಮಿಷನ್ (ಗ್ರಾ) ಯೋಜನೆಯನ್ನು ಸದುಪಯೋಗಪಡಿಸಿಕೊಂಡು ನಂದಿನಿ ತನ್ನ ಜೀವನವನ್ನು ಕಟ್ಟಿಕೊಂಡಿದ್ದಲ್ಲದೆ, ಗ್ರಾಮದಲ್ಲಿ ಸಂಪೂರ್ಣ ಸ್ವಚ್ಛತೆ ಸಾಧಿಸಲು ಶ್ರಮಿಸುತ್ತಿದ್ದಾರೆ. ನಂದಿನಿಯವರ ದುಡಿಮೆ, ಶ್ರಮ ಕಂಡು ಗ್ರಾಮ ಪಂಚಾಯಿತಿಯವರು, ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ.



ಮನೆ ಮನೆಗೆ ಗಂಗೆ
ಜಲ ಜೀವನ್ ಮಿಷನ್

ಸ್ವಚ್ಛ ಭಾರತ
ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ

ಪಂಚಮಿತ್ರ ಸಹಾಯವಾಣಿ
8277506000

2025
International Year of Cooperatives
Cooperatives Build a Better World